ದಿಃ 07-06-2017 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಃ ಪಾಟೀ ಸವಾಲು ಃ 16 ನೇ ಪ್ರತಿವಾದಿ ಪರ ವಕೀಲರಿಂದ ಃ

ವಾದಿ ಕಮಲವ್ವ ಈ ದಾವೆಯನ್ನು ಯಾವ ವಿಷಯಕ್ಕಾಗಿ ಮಾಡಿರುತ್ತಾಳೆ ಅಂತಾ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಅಂತಾ ನನಗೆ ಮಾಹಿತಿ ಇಲ್ಲ. ಕಮಲವ್ವ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿರುತ್ತಾಳೆ. ಸುಮಾರು 7-8 ವರ್ಷಗಳಿಂದ ಕಮಲವ್ವ ನಮ್ಮ ಮನೆಯ ಪಕ್ಕ ವಾಸವಾಗಿರುತ್ತಾಳೆ. ಸುಮಾರು 40 ವರ್ಷಗಳಿಂದ ಕಮಲವ್ವ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿರುತ್ತಾಳೆ ಅಂತಾ ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವಳು ಬಂದು ಹೋಗಿ ಮಾಡುತ್ತಾಳೆ ಅಂತಾ ಹೇಳುತ್ತಾರೆ. ಕಮಲವ್ವಳ ಮದುವೆ ಯಾರ ಜೊತೆ ಆಗಿರುತ್ತದೆ ಅಂತಾ ನನಗೆ ಗೊತ್ತಿಲ್ಲ, ಆದರೆ ಮದುವೆ ಹೋಗಿದ್ದೆ. ಮದುವೆ ಯಾವಾಗ ಆಗಿರುತ್ತದೆ ಅಂತಾ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಾನು ಯಾವಾಗಲಾದರೊಮ್ಮೆ ಹೀರೂರು ಗ್ರಾಮಕ್ಕೆ ಹೋಗುತ್ತಿದ್ದೆ.

2. ಕರಡೆಪ್ಪ ಈತನಿಗೆ ಮೊದಲನೇ ಹೆಂಡತಿ ಯಲ್ಲವ್ವ ಅನ್ನುವವಳು ಇದ್ದಳು ಅನ್ನುವುದು ಸುಳ್ಳು. ಅವಳು ಅನಾರೋಗ್ಯದಿಂದ ತೀರಿಕೊಂಡಿರುತ್ತಾಳೆ ಅನ್ನುವುದು ಸರಿ. ಆನಂತರ ಕರಡೆಪ್ಪ ಫಕ್ಕೀರವ್ವ ಅನ್ನುವವಳನ್ನು ಎರಡನೇ ಮದುವೆಯಾಗಿರುತ್ತಾನೆ ಅನ್ನುವುದು ಸುಳ್ಳು. ಕರಡೆಪ್ಪ ಮತ್ತು ಫಕ್ಕೀರವ್ವ ಇವರ ದಾಂಪತ್ಯ ಜೀವನದಿಂದ ಅವರಿಗೆ ಇಬ್ಬರು ಗಂಡು ಮಕ್ಕಳಾದ ಆನಂದ ಮತ್ತು ನೆಟಗಲ್ಲಪ್ಪ ಜನಿಸಿರುತ್ತಾರೆ ಅನ್ನುವುದು ಸುಳ್ಳು. ಆನಂದ ಮತ್ತು ನೆಟಗಲ್ಲಪ್ಪ ಇವರ ಪರಿಸ್ಥಿತಿ ಆಗ ಸರಿ ಇರಲಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ಆಗ ಅವರು ಕುರಿ ಕಾಯಲು ಬೇರೆಯವರ ಹತ್ತಿರ ಇದ್ದರು ಅನ್ನುವುದು ನನಗೆ ಗೊತ್ತಿಲ್ಲ. ಆಗ ಅವರಿಗೆ ವರ್ಷಕ್ಕೆ ಇಷ್ಟು ಹಣ ಮತ್ತು ಇಷ್ಟು ಕುರಿಗಳು ಅಂತಾ ಕೊಡುತ್ತಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಆನಂದಪ್ಪ ಮತ್ತು ನೆಟಗಲ್ಲಪ್ಪ ಇವರು

ತಮಗೆ ಹಿಂದಿನಿಂದ ಕೊಟ್ಟಂತಹ ಹಣವನ್ನು ಕೂಡಿಸಿಕೊಂಡು 1997 ನೇ ಇಸ್ವಿಯಲ್ಲಿ ಬ್ಯಾಗವಾದಿ ಗ್ರಾಮದ ರಿ ಸ ನಂ. 131៖1 ಕ್ಷೇತ್ರ 4 ಎಕರೆ 20 ಗುಂಟೆ ಜಮೀನನ್ನು ಆನಂದಪ್ಪನ ಹೆಸರಿನಲ್ಲಿ ಖರೀದಿ ಹಿಡಿದರು ಅನ್ನುವುದು ಸುಳ್ಳು. ಆ ಸಮಯದಲ್ಲಿ ಆನಂದಪ್ಪ 17 ವರ್ಷ ವಯಸ್ಸಿನವನಾಗಿದ್ದ ಅನ್ನುವುದು ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಆಸ್ತಿಯನ್ನು ಅವನ ತಂದೆಯ ಹೆಸರಿನಲ್ಲಿ ಅಲ್ಪವಯಿ ಸಂರಕ್ಷಣದಾರ ಅಂತಾ ಖರೀದಿ ಮಾಡಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

៖ ಮರು ವಿಚಾರಣೆ ៖ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ನ. ಸ. ಓ ಹೇ ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್